8

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ:ಕವಿಪ್ರನಿನಿ/ಕ.ಸಂ-31/2021-22

ನಿಗಮ ಕಾರ್ಯಾಲಯ
ಕಾವೇರಿ ಭವನ,
ಬೆಂಗಳೂರು-560009
ದಿನಾಂಕ: 22 OCT 2021

## ಸುತ್ತೋಲೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಆಶ್ರಯದಲ್ಲಿ, ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ "ಕನ್ನಡಕ್ಕಾಗಿ ನಾವು ಕನ್ನಡ ರಾಜ್ಯೋತ್ಸವ ಅಭಿಯಾನ"ವನ್ನು ಅಕ್ಟೋಬರ್ 24.11.2021 ರಿಂದ 30.11.2021, ರವರೆಗೆ ವಿಶೇಷವಾಗಿ ಆಚರಿಸುತ್ತಿರುವ ಹಿನ್ನೆಲೆಯಲ್ಲಿ, ಕವಿಪ್ರನಿನಿ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅಕ್ಟೋಬರ್ 28 ಗುರುವಾರ, 2021 ಬೆಳಗ್ಗೆ 11-00 ಕ್ಕೆ ರಾಜ್ಯಾದಾದ್ಯಂತ ಒಂದು ಲಕ್ಷ ಕಂಠಗಳಲ್ಲಿ ಮೂರು ಸುಮಧುರ ಕನ್ನಡ ಗೀತೆಗಳ ಗಾಯನ ಹಮ್ಮಿಕೊಂಡಿದ್ದು, ಡಾ.ಕುವೆಂಪು ರವರ **"ಬಾರಿಸು ಕನ್ನಡ ಡಿಂಡಿಮವ"**, ಡಾ.ಕೆ.ಎಸ್.ನಿಸಾರ ಅಹಮದ್ ರವರ **"ಜೋಗದ ಸಿರಿ ಬೆಳಕಿನಲ್ಲಿ "** ಹಾಗೂ ಶ್ರೀ ಹಂಸಲೇಖ ರವರ **"ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು"** ಈ ಮೂರು ಗೀತೆಗಳನ್ನು ಒಟ್ಟಾಗಿ ಕವಿಪ್ರನಿನಿಯ ಹಾಗೂ ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿಗಳ ಎಲ್ಲಾ ಕಚೇರಿಗಳಲ್ಲೂ ಹಾಡಲಾಗುವುದು.

ಅಲ್ಲದೆ, ರಾಜ್ಯ ಸರ್ಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ "ಕನ್ನಡಕ್ಕಾಗಿ ನಾವು ರಾಜ್ಯೋತ್ಸವ ಅಭಿಯಾನ" ನಡೆಸುತ್ತಿರುವ ಪ್ರಯುಕ್ತ ದಿನಾಂಕ: 24.10.2021 ರಿಂದ 30.10.2021 ರವರೆಗೆ ಪ್ರತಿ ದಿನ ಎರಡು ಗಂಟೆಗಳ ಕಾಲ ರಾಜ್ಯಾದ್ಯಂತ ನಾಟಕ, ಸಂಗೀತ, ನೃತ್ಯದಂತಹ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯಾ ಕಚೇರಿಗಳ ಖರ್ಚಿನಲ್ಲಿ ಆಯೋಜಿಸಲು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರು ಸೂಚಿಸಿರುವ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಅಧಿಕಾರಿ/ನೌಕರರು ಕಡ್ಡಾಯವಾಗಿ ಸಮಾರಂಭವನ್ನು ಆಯೋಜಿಸಲು ಮತ್ತು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಈ ಮೂಲಕ ಕೋರಲಾಗಿದೆ.

ಸೂಚನೆ: ಕೋವಿಡ್-19 ರ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಹಾಗೂ ಸರ್ಕಾರ ಸೂಚಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ಕವಿಪ್ರನಿನಿ

## ಮೆಮೋ

ಕ್ರಮಾಂಕ:ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/ಹಿಸ-2/21-22/ Cys-1066 ದಿನಾಂಕ: 26 OCT 2021

ನಿರ್ದೇಶಕರು(ಆ ಮತ್ತು ಮಾ.ಸಂ.) ಕವಿಪ್ರನಿನಿ., ಬೆಂಗಳೂರು ಇವರ ಸುತ್ತೋಲೆ ಪತ್ರ ಸಂಖ್ಯೆ:ಕವಿಪ್ರನಿನಿ/ಕ.ಸಂ-31/2021-22 ದಿನಾಂಕ:22.10.2021 ಹಾಗೂ ಪರಿಷ್ಕೃತ ಸುತ್ತೋಲೆ ಸಂಖ್ಯೆ:ಕವಿಪ್ರನಿನಿ/ಕ.ಸಂ-31/2021-22 ದಿನಾಂಕ:25.10.2021ರ ಸುತ್ತೋಲೆಗಳನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ) 26/x/21
ಚಾ.ವಿ.ಸ.ನಿ.ನಿ., ಮೈಸೂರು.

ಪ್ರತಿಗಳು:

- ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ, ಮೈಸೂರುರವರ ಅವಗಾಹನೆಗಾಗಿ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.

- ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಛೇರಿ. ಚಾವಿಸನಿನಿ., ಮೈಸೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಮೈಸೂರುರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
- ಮುಖ್ಯ ಗುಮಾಸ್ತರು, ನಿಗಮ ಕಛೇರಿ, ಚಾವಿಸನಿನಿ., ಮೈಸೂರುರವರ ಮಾಹಿತಿಗಾಗಿ ಹಾಗೂ ಸದರಿ ಕಾರ್ಯಕ್ರಮವನ್ನು ಆಯೋಜಿಸಲು ಕ್ರಮ ಕೈಗೊಳ್ಳುವುದು.
- ಆ.ಕಾ-ವ್ಯ.ನಿ/ನಿ(ತಾಂ)/ಮು.ಆ.ಅ
- ಸ-2(ಆ ಮತ್ತು ಮಾ.ಸಂ)/ಪ್ರ.ಕ.